# ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊನ್ನಾಳಿ

## ಸಿ.ಸಿ.254/2023

ಸಾಕ್ಷಿದಾರರ ಹೇಳಿಕೆಃ

| | | | |
|---|---|---|---|
| **ಹೆಸರು** | : | ದೇವರಾಜ್ | ಚಾಸಾಃ **19** ಫ್ರಾಸಾಃ **5** |
| **ತಂದೆಯ ಹೆಸರು** | : | ಯಲ್ಲಪ್ಪ | |
| **ವಯಸ್ಸು** | : | 44 ವರ್ಷ | |
| **ವೃತ್ತಿ** | : | ಸಿ.ಪಿ. ಐ | |
| **ವಾಸಸ್ಥಳ** | : | ಶಿವಮೊಗ್ಗ | |

ದಿನಾಂಕಃ 28-02-2026 ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ :-ಮಾನ್ಯ ಸ.ಸ.ಅ. ರವರಿಂದ:-

ನಾನು ದಿಃ 11-10-2019 ರಿಂದ ದಿಃ 30-09-2022 ರವರೆಗೆ ಹೊನ್ನಾಳಿ ವೃತ್ತದ ವೃತ್ತ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿದ್ದೇನು.

ದಿಃ 08-07-2022 ರಂದು ಈ ಪ್ರಕರಣದ ಕಡತವನ್ನು ಚಾಸಾ-18 ರವರಿಂದ ಪಡೆದುಕೊಂಡು ಅಲ್ಲಿಯವರೆಗೂ ಆದ ತನಿಖೆಯನ್ನು ಪರಿಶೀಲಿಸಿ ತನಿಖೆಯನ್ನು ಮುಂದುವರೆಸಿ, ನಂತರ ಅದೇ ದಿನ ಅಪಘಾತವಾದ ಸ್ಥಳಕ್ಕೆ ಭೇಟಿ ನೀಡಿ ಚಾಸಾ-4 ಮತ್ತು 5 ರವರಿಗೆ ನೋಟೀಸನ್ನು ಜಾರಿ ಮಾಡಿ ನಂತರ ಚಾಸಾ-1 ರವರು ಸ್ಥಳ ತೋರಿಸಿದ ಮೇರೆಗೆ ಸ್ಥಳ ಮಹಜರ್ ಕ್ರಮವನ್ನು ಬೆಳಗ್ಗೆ 10-00 ರಿಂದ 11-00 ಗಂಟೆ ಸಮಯದಲ್ಲಿ ಚಾಸಾ-4 ಮತ್ತು 5 ರವರ ಸಮಕ್ಷಮ ಮಹಜರ್ ಕ್ರಮ ಜರುಗಿಸಿ, ಕಚ್ಚ ನಕಾಶೆಯನ್ನು ತಯಾರಿಸಿ, ಛಾಯಾಚಿತ್ರಗಳನ್ನು ತೆಗೆದಿರುತ್ತೇನೆ. ಅದೇ ದಿನ ಚಾಸಾ-**1**

ರವರ ಮರುಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ.

ನಂತರ ಠಾಣೆಗ ವಾಪಾಸ್ಸು ಬಂದು ಕೆಎ-17/ಇಎಂ-0801 ಮೋಟಾರ್ ಸೈಕಲ್ ಅನ್ನು ಅಮಾನತ್ತು ಪಡಿಸಿಕೊಳ್ಳಲು ಚಾಸಾ-4 ಮತ್ತು 5 ರವರಿಗೆ ನೋಟೀಸನ್ನು ಜಾರಿ ಮಾಡಿ ನಂತರ ಚಾಸಾ-1, 4 ಮತ್ತು 5 ರವರ ಸಮಕ್ಷಮ ಅಮಾನತ್ತು ಮಹಜರ್ ಕ್ರಮವನ್ನು ಬೆಳಗ್ಗೆ 11-30 ರಿಂದ 12-30 ಗಂಟೆ ಸಮಯದಲ್ಲಿ ಜರುಗಿಸಿ ಛಾಯಾಚಿತ್ರಗಳನ್ನು ತೆಗೆದಿರುತ್ತೇನೆ. ಮಹಜರ್ ಸಮಯದಲ್ಲಿ ಛಾಯಾಚಿತ್ರಗಳನ್ನು ತೆಗೆದ ಬಗ್ಗೆ ಚಾಸಾ-15 ಮತ್ತು 16 ರವರಿಂದ 65 ಬಿ ಪ್ರಮಾಣ ಪತ್ರವನ್ನು ಪಡೆದುಕೊಂಡಿರುತ್ತೇನೆ.

ದಿಃ 16-07-2022 ರಂದು ಆರೋಪಿ ಸ್ವ ಇಚ್ಚೆಯಿಂದ ಠಾಣೆಗೆ ಹಾಜರಾಗಿದ್ದರಿಂದ ಆರೋಪಿಯ ವಿರುದ್ಧ ದಸ್ತಗಿರಿ ಕ್ರಮವನ್ನು ಅನುಸರಿಸಿ ಠಾಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ.

ದಿಃ 22-07-2022 ರಂದು ಚಾಸಾ-12 ರವರಿಗೆ ನೋಟೀಸನ್ನು ಜಾರಿ ಮಾಡಿ ಅವರಿಂದ ಪ್ರತ್ಯುತ್ತರವನ್ನು ಮತ್ತು ನಷ್ಟಭರ್ತಿ ಮುಚ್ಚಳಿಕೆ ಪತ್ರವನ್ನು ಪಡೆದುಕೊಂಡು ಬೈಕನ್ನು ಅವರ ವಶಕ್ಕೆ ಬಿಟ್ಟುಕೊಟ್ಟಿರುತ್ತೇನೆ. ನಂತರ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ-20 ರವರಿಗೆ ಹಸ್ತಾಂತರಿಸಿರುತ್ತೇನೆ.

ಸ್ಥಳ ಮಹಜರ್ ಅನ್ನು ಈಗಾಗಲೇ ನಿಪಿ-2 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-2(ಸಿ) ಎಂದು, ಕಚ್ಚ ನಕಾಶೆಯನ್ನು ಈಗಾಗಲೇ ನಿಪಿ-3 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-3(ಸಿ) ಎಂದು, ನಿಪಿ-4 ರಿಂದ 9 ಛಾಯಾಚಿತ್ರಗಳನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಅಮಾನತ್ತು ಮಹಜರ್ ಅನ್ನು ಈಗಾಗಲೇ ನಿಪಿ-10 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-10(ಸಿ) ಎಂದು, ನಿಪಿ-11 ಮತ್ತು 12 ಛಾಯಾಚಿತ್ರಗಳನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಚಾಸಾ-1 ರವರ ಮರುಹೇಳಿಕೆಯನ್ನು ಈಗಾಗಲೇ ನಿಪಿ-19 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-19(ಎ) ಎಂದು, ಐ ಎಂ ವಿ ವರದಿಯನ್ನು ಈಗಾಗಲೇ ನಿಪಿ-22 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-22(ಎ) ಎಂದು, ಚಾಸಾ-2 ರವರ ಮುಚ್ಚಳಿಕೆ ಪತ್ರವನ್ನು ಈಗಾಗಲೇ ನಿಪಿ-24 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-24(ಬಿ) ಎಂದು, ಚಾಸಾ-2

ರವರ ಹೇಳಿಕೆಯನ್ನು ಈಗಾಗಲೇ ನಿಪಿ-25 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-25(ಎ) ಎಂದು, ಚಾಸಾ-3 ರವರ ಮುಚ್ಚಳಿಕೆ ಪತ್ರವನ್ನು ಈಗಾಗಲೇ ನಿಪಿ-26 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-26(ಬಿ) ಎಂದು, ಚಾಸಾ-3 ರವರ ಹೇಳಕೆಯನ್ನು ಈಗಾಗಲೇ ನಿಪಿ-27 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-27(ಎ) ಎಂದು, ಚಾಸಾ-4 ಮತ್ತು 5 ರವರಿಗೆ ನೀಡಿದ 2 ನೋಟೀಸುಗಳನ್ನು ಈಗಾಗಲೇ ನಿಪಿ-28 ಮತ್ತು 29 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-28(ಬಿ) ಮತ್ತು 29(ಬಿ) ಎಂದು, ಚಾಸಾ-15 ಮತ್ತು 16 ರವರಿಂದ ಪಡೆದುಕೊಂಡ 65 ಬಿ ಪ್ರಮಾಣ ಪತ್ರಗಳನ್ನು ನಿಪಿ-30 ಮತ್ತು 31, ಸಾಕ್ಷಿಯ ಸಹಿಯನ್ನು ನಿಪಿ-30(ಎ) ಮತ್ತು 31(ಎ), ಚಾಸಾ-12 ರವರಿಗೆ ನೀಡಿದ ನೋಟೀಸನ್ನು ನಿಪಿ-32 ಎಂದು, ಸಾಕ್ಷಿಯ ಸಹಿಯನ್ನು ನಿಪಿ-32(ಎ) ಎಂದು, ಚಾಸಾ-12 ರವರು ನೀಡಿದ ಪ್ರತ್ಯುತ್ತರವನ್ನು ನಿಪಿ-33 ಎಂದು, ಸಾಕ್ಷಿಯ ಸಹಿಯನ್ನು ನಿಪಿ-33(ಎ) ಎಂದು, ಚಾಸಾ-12 ರವರು ಬರೆದುಕೊಟ್ಟ ಮುಚ್ಚಳಿಕೆ ಪತ್ರವನ್ನು ನಿಪಿ-34 ಎಂದು, ಸಾಕ್ಷಿಯ ಸಹಿಯನ್ನು ನಿಪಿ-34(ಎ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು:- ಆರೋಪಿ ಪರ ವಕೀಲರರಿಂದ:-</u>

ಅಪಘಾತವಾದ ಸ್ಥಳಕ್ಕೆ ಭೇಟಿ ನೀಡಿಲ್ಲ ಪಂಚರಿಗೆ ನೋಟೀಸನ್ನು ಜಾರಿ ಮಾಡಿಲ್ಲ ಮತ್ತು ಸ್ಥಳ ಮಹಜರ್ ಕ್ರಮ ಜರುಗಿಸಿಲ್ಲ, ಕಚ್ಚ ನಕಾಶೆಯನ್ನು ತಯಾರಿಸಿಲ್ಲ ಮತ್ತು ಛಾಯಾಚಿತ್ರಗಳನ್ನು ತೆಗೆದಿಲ್ಲ ಎಂದರೆ ಸರಿಯಲ್ಲ. ಪಂಚರಿಗೆ ನೋಟೀಸನ್ನು ಜಾರಿ ಮಾಡಿಲ್ಲ ಮತ್ತು ವಾಹನವನ್ನು ಅಮಾನತ್ತು ಪಡಿಸಿಕೊಂಡು ಅಮಾನತ್ತು ಮಹಜರ್ ಕ್ರಮ ಜರುಗಿಸಿ, ಛಾಯಾಚಿತ್ರಗಳನ್ನು ತೆಗೆದಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರ ಮರುಹೇಳಿಕೆಯನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಚಾಸಾ-15 ಮತ್ತು 16 ರವರಿಂದ 65 ಬಿ ಪ್ರಮಾಣ ಪತ್ರವನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿಯು ಸ್ವ ಇಚ್ಚೆಯಿಂದ ಠಾಣೆಗೆ ಹಾಜರಾಗಿಲ್ಲ, ಆರೋಪಿಯ ವಿರುದ್ಧ ದಸ್ತಗಿರಿ ಕ್ರಮವನ್ನು ಅನುಸರಿಸಿಲ್ಲ ಮತ್ತು ಠಾಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಿಲ್ಲ ಎಂದರೆ ಸರಿಯಲ್ಲ. ಚಾಸಾ-12 ರವರಿಗೆ ನೋಟೀಸನ್ನು ಜಾರಿ ಮಾಡಿಲ್ಲ ಅವರಿಂದ ಪ್ರತ್ಯುತ್ತರವನ್ನು ಮತ್ತು ನಷ್ಟಭರ್ತಿ ಮುಚ್ಚಳಿಕೆ ಪತ್ರವನ್ನು ಪಡೆದುಕೊಂಡಿಲ್ಲ ಮತ್ತು ಬೈಕನ್ನು ಅವರ ವಶಕ್ಕೆ ಬಿಟ್ಟುಕೊಟ್ಟಿಲ್ಲ ಎಂದರೆ ಸರಿಯಲ್ಲ. ಆರೋಪಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲದಿದ್ದರೂ ಸಹ ಸುಳ್ಳು ತನಿಖೆಯನ್ನು ನಡೆಸಿ ಸುಳ್ಳು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ .

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.